

ಕಾಲಾ ಮಿಟ್ಟಿಯ ಸಂಸ್ಕರಣೆ

ದೇರಾವಾಲ ಅವರು ನುರಿತ ಡಿಸೈನರ್ ಕೂಡಾ ಹೌದು.

ಸಾಮಾನ್ಯವಾಗಿ ಬಟ್ಟೆಗಳ ಸಂಸ್ಕರಣಾ ಘಟಕಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಆರೋಗ್ಯದ ಸಮಸ್ಯೆಗಳು ಹೆಚ್ಚು. ಆದರೆ ಇಲ್ಲಿ ನೈಸರ್ಗಿಕ ಬಣ್ಣಗಳನ್ನೇ ಬಳಸುವುದರಿಂದ ಆರೋಗ್ಯದ ಮೇಲೆ ಯಾವ ದುಷ್ಪರಿಣಾಮವೂ ಇಲ್ಲ. ಇಲ್ಲಿ ಬಣ್ಣದ ಸಂಸ್ಕರಣೆಗೆ ಬಳಸುವ ಕಪ್ಪು ಮಣ್ಣನ್ನು ಗ್ರಾಮಸ್ಥರು ತಲೆಗೆ ಶಾಂಪೂ ಆಗಿ ಬಳಸುವುದೂ ಉಂಟು! 'ನಮ್ಮ ಕಾರ್ಮಿಕರಿಗೆ ಯಾವುದೇ ಆರೋಗ್ಯದ ತೊಂದರೆ ಉಂಟಾಗಿಲ್ಲ. ನಮ್ಮ ಘಟಕದ ತ್ಯಾಜ್ಯ ನೀರನ್ನು ಹೊಲಗದ್ದೆಗಳಿಗೆ ಹಾಕಲು ರೈತರೇ ಕೇಳಿ ಪಡೆದುಕೊಳ್ಳುತ್ತಾರೆ' ಎಂದರು ರೋಶನ್ ದೇರಾವಾಲ.

ಬಣ್ಣದ ವಿನ್ಯಾಸಗಳಿಗಾಗಿ ರಾಸಾಯನಿಕಗಳನ್ನು ಬಳಸುವ ಬಟ್ಟೆಗಳು ಅತ್ಯಂತ ಅಗ್ಗದ ದರಕ್ಕೆ ಸಿಗುತ್ತವೆ ಎನ್ನುವುದು ನಿಜ. ಆದರೆ ಅದರಿಂದ ಉಂಟಾಗುವ ಆರೋಗ್ಯದ ಸಮಸ್ಯೆಗಳ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವು ಉಂಟಾಗಿಲ್ಲ. ಕರಕುಶಲಕರ್ಮಿಗಳು ಶ್ರಮಪಟ್ಟು ತಯಾರಿಸುವ, ವನಸ್ಪತಿಯ ನೈಸರ್ಗಿಕ ಬಣ್ಣಗಳ ವಿನ್ಯಾಸಗಳೊಂದಿಗೆ ಹೊರಬರುತ್ತಿರುವ ಫ್ಯಾಬ್ ಇಂಡಿಯಾ ಉತ್ಪನ್ನಗಳಲ್ಲಿ ಕುಶಲಕರ್ಮಿಗಳ ವೈಯಕ್ತಿಕ ಸ್ಪರ್ಶವೂ ಇದೆ. ಆರೋಗ್ಯಕ್ಕೆ ಈ ಬಟ್ಟೆಗಳು ಪೂರಕವಾಗಿರುವುದು ಮಾತ್ರವಲ್ಲ, ನಮ್ಮ ಗ್ರಾಮೀಣ ಕಲಾ ಪರಂಪರೆಯ ಉಳಿವಿಗೂ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿವೆ. ನೈಸರ್ಗಿಕ ನೂಲು ಮತ್ತು ನೈಸರ್ಗಿಕ ಮೂಲವಸ್ತುಗಳನ್ನು ಬಳಸಿ, ಕುಶಲಕರ್ಮಿಗಳ ವೈಯಕ್ತಿಕ ಸ್ಪರ್ಶದಿಂದ ತಯಾರಾಗುವ ಬಟ್ಟೆಗಳು ಫ್ಯಾಷನ್ ಲೋಕದಲ್ಲೂ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಇತ್ತೀಚೆಗೆ ಮೂಡಿಸುತ್ತಿವೆ.

## ಫ್ಯಾಬ್ ಇಂಡಿಯಾದ ವೈವಿಧ್ಯ

ಫ್ಯಾಬ್ ಇಂಡಿಯಾ ಈ ಬೇಸಿಗೆಯಲ್ಲಿ ಇಂಡಿಗೋ ನೀಲಿ ಬಣ್ಣದಲ್ಲಿ ವೈವಿಧ್ಯಮಯ ಬಟ್ಟೆಗಳ ಶ್ರೇಣಿಯನ್ನು ಹೊರತಂದಿದೆ. ಭಾರತೀಯ ಶೈಲಿಯ ಮತ್ತು ಫ್ಯೂಶನ್ ಮಾದರಿಯ ಕುರ್ತಾಗಳು, ಟ್ಯೂನಿಕ್, ಸ್ಕರ್ಟ್, ಟಾಪ್, ಪ್ಯಾಂಟ್ ಪಲ್ಲಾಝೊ, ಡ್ರೆಸ್, ಸೀರೆಗಳು, ದುಪಟ್ಟಾ, ಸ್ಟೋಲ್, ಶರ್ಟ್ ಮತ್ತು ಪುರುಷರ ಕುರ್ತಾಗಳ ಹೊಸ ವಿನ್ಯಾಸಗಳು ಮಾರುಕಟ್ಟೆಗೆ ಬಂದಿವೆ.

ಗ್ರಾಮೀಣ ಪ್ರದೇಶದ ವಿನ್ಯಾಸಗಳೇ ಈಗ ನಗರ ಮತ್ತು ಮಹಾನಗರಗಳಲ್ಲಿ ಫ್ಯಾಷನ್‌ಪ್ರಿಯರ ಅಚ್ಚುಮೆಚ್ಚು ಆಗಿರುವುದು ವಿಶೇಷ. ಜೈಪುರದ ಬಗ್ರುವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಏಪ್ರಿಲ್‌ನಲ್ಲಿ ಅಲ್ಲಿ ನಡೆಯುವ ಬಗ್ರು ಮೇಳ ಜನಪ್ರಿಯ. ಹಿಂದೆಲ್ಲಾ ಈ ಮೇಳದಲ್ಲಿ ಅಲ್ಲೇ ತಯಾರಾಗುವ ಬಟ್ಟೆಗಳು ಹೆಚ್ಚು ಮಾರಾಟವಾಗುತ್ತಿದ್ದವು. ಆದರೆ ಈಗ ಅಗ್ಗದ ದರದ ಪಾಲಿಯಸ್ಟರ್ ಬಟ್ಟೆಗಳು ಹಳ್ಳಿಗಳಲ್ಲಿ ಹೆಚ್ಚುತ್ತಿವೆ. ಬಗ್ರುವಿನಲ್ಲೇ ತಯಾರಾಗುವ ನೈಸರ್ಗಿಕ ಬಣ್ಣಗಳ ಬಟ್ಟೆ ದೇಶದಾದ್ಯಂತ ನಗರಗಳಲ್ಲಿ ಜನಪ್ರಿಯವಾಗಿದೆ. ಭಾರತದ 93 ನಗರಗಳಲ್ಲಿ ಫ್ಯಾಬ್ ಇಂಡಿಯಾ 243 ಮಳಿಗೆಗಳನ್ನು ಹೊಂದಿದ್ದು, ವಿದೇಶಗಳಲ್ಲೂ 11 ಮಳಿಗೆಗಳಿವೆ.

ರೋಶನ್ ದೇರಾವಾಲ ಅವರು ನುರಿತ ಡಿಸೈನರ್ ಕೂಡಾ ಹೌದು. 'ಈ ಸೀಸನ್‌ನಲ್ಲಿ ಫ್ಯಾಬ್ ಇಂಡಿಯಾ ತರುತ್ತಿರುವ ಹೊಸ ಬಟ್ಟೆಗಳ ಶ್ರೇಣಿಯಲ್ಲಿ ವಿಶೇಷವಾಗಿ ಮೈಸೂರಿನ ಅರಮನೆಗಳು ಮತ್ತು ಶ್ರೀರಂಗಪಟ್ಟಣದ ಐತಿಹಾಸಿಕ ಕಟ್ಟಡಗಳಲ್ಲಿ ಕಂಡುಬರುವ ಡಿಸೈನ್‌ಗಳನ್ನು ಬಳಸಿದ್ದೇವೆ. ಅಲ್ಲಿನ ಸುಂದರ ಗುಂಬಜ್‌ಗಳು, ತೇಗದ ತೊಲೆಗಳ ಮೇಲೆ ಚಿತ್ರಿಸಿರುವ ವಿನ್ಯಾಸಗಳು ನಮ್ಮ ಬಟ್ಟೆಗಳಲ್ಲಿ ಪ್ರತಿಫಲಿಸಿವೆ' ಎಂದರು ರೋಶನ್. ಕರ್ನಾಟಕದ ಐತಿಹಾಸಿಕ ಕಟ್ಟಡಗಳ ವಿನ್ಯಾಸಗಳು ಫ್ಯಾಬ್ ಇಂಡಿಯಾ ಉತ್ಪನ್ನಗಳ ಮೂಲಕ ದೇಶಾದ್ಯಂತ ಪ್ರಸಿದ್ಧಿ ಪಡೆಯುತ್ತಿರುವುದು ಕುತೂಹಲಕರ.